ಒ್ ಎಸ ನಂಃ 98-109/2017.

ಡಿ.ಡಬ್ಲ್ಯು. 2

ಇಂದು ದಿಃ 27.11.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಅಸಲು ದಾವೆ 98/2017 ರ ವಾದಿ ಪರ ಶ್ರೀ.ಎಸ ಸಿ ಕೆ, ವಕೀಲರಿಂದ,**

1. ನನಗೆ ಓದಲು ಬರೆಯಲು ಬರುವುದಿಲ್ಲ. ಈ ದಾವೆ ಯಾರು ಯಾರ ಮೇಲೆ ಮಾಡಿದ್ದಾರೆಂದು ನನಗೆ ಮಾಹಿತಿ ಇಲ್ಲ. ಮಾನ್ಯ ನ್ಯಾಯಾಲಯದಿಂದ ನನಗೆ ಯಾವುದೇ ಕರೆಯಾಜ್ಞೆ ಬಂದಿಲ್ಲ. ಅಸಲು ದಾವೆ 98/2017 ರ 2 ನೇ ಪ್ರತಿವಾದಿ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ. ಸದರಿ 2 ನೇ ಪ್ರತಿವಾದಿ ಈ ದಾವೆಯ ಬಗ್ಗೆ ಹೇಳಿ ಅವನಿಗೆ ಅನುಕೂಲವಾಗಲು ಸಾಕ್ಷಿ ಹೇಳಬೇಕೆಂದು ವಿನಂತಿಸಿದ ಮೇರೆಗೆ ನಾನು ಬಂದಿರುತ್ತೇನೆ.

2. ಸದರಿ 2 ನೇ ಪ್ರತಿವಾದಿಯ ಮನೆತನಕ್ಕೆ ಸುಮಾರು 3 ಎಕರೆ 3 ಗುಂಟೆ, 5 ಎಕರೆ 3 ಗುಂಟೆ ಜಮೀನು ಇರುವ ಬಗ್ಗೆ ನನಗೆ ತಿಳಿದಿರುತ್ತದೆ. ಸದರಿ ಜಮೀನುಗಳ ಉತಾರಗಳಲ್ಲಿ ಯಾರ ಹೆಸರುಗಳು ಇರುತ್ತವೆ ಎಂದು ನನಗೆ ಮಾಹಿತಿ ಇಲ್ಲ. ಅಸಲು ದಾವೆ 98/2017 ರ 1 ನೇ ವಾದಿಯ ತಂದೆಯಾದ ಪಕೀರಪ್ಪ ತೀರಿ ಹೋಗುವವರೆಗೂ ತೀರುಗಾಡಿಕೊಂಡು ಇದ್ದ ಎಂದರೆ ಸರಿ, ಸಾಕ್ಷಿ ಮುಂದುವರೆದು ನುಡಿಯುತ್ತಾರೆ ಸ್ವಲ್ಪ ಆರಾಮ ಇರಲಿಲ್ಲ ಎಂದು. ಸದರಿ 1 ನೇ ವಾದಿಯಾದ ಪಕೀರಪ್ಪನ ಮದುವೆಯನ್ನು 2 ನೇ ವಾದಿಯಾದ ಯಲ್ಲವ್ವನೊಂದಿಗೆ ಮಾಡಿರುತ್ತದೆ. ಸದರಿ ಯಲ್ಲವ್ವ ಪಕೀರಪ್ಪನನ್ನು ಮದುವೆಯಾದ ನಂತರ ಕೋಗಿಲಗೇರೆ ಗ್ರಾಮದಲಿಲ ವಾಸ ಮಾಡಿಕೊಂಡು ಇದ್ದಳು ಎಂದರೆ ಸರಿಯಲ್ಲ. ಸದರಿ ಯಲ್ಲವ್ವ ಸುಮಾರು 3 ವರುಷಗಳ ಕಾಲ ಸದರಿ ಗ್ರಾಮದಲ್ಲಿ ಪಕೀರಪ್ಪನೊಂದಿಗೆ ಬಾಳ್ವೆಮಾಡಿದ್ದಾಳೆ ಎಂದರೆ ಸರಿಯಲ್ಲ. ಸದರಿ ನನ್ನ ಮುಖ್ಯ ವಿಚಾರಣೆಯ ಶಪತ ಪತ್ರದಲ್ಲಿ ಎನೆಲ್ಲಾ ಬರೆದಿದೆ ಎಂದು ಈಗ ನನಗೆ ನೆನಪಿಲ್ಲ.

ಒ್ ಎಸ ನಂಃ 98-109/2017.

ಡಿ.ಡಬ್ಲ್ಯು. 2

3. ಸದರಿ 2 ನೇ ವಾದಿ ಯಲ್ಲವ್ವ ತವರುಮನೆಗೆ ಹೋಗಿದ್ದು ಅವಳನ್ನು ಕರೆದುಕೊಂಡು ಬಂದು ಪಕೀರಪ್ಪನಿಗೆ ಬಾಳ್ವೆ ಮಾಡಲು ತಿಳಿಸಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಕೀರಪ್ಪ ತೀರಿಕೊಂಡ ನಂತರ 1 ನೇ ವಾದಿಯ ಹೆಸರು 2015 ನೇ ಇಸವಿಯಲ್ಲಿ ದಾವಾ ಆಸ್ತಿಯ ಉತಾರಗಳಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಯಲ್ಲವ್ವ ಮತ್ತು ಪಕೀರಪ್ಪನ ದಾಂಪತ್ಯ ಜೀವನದಿಂದಲೇ ಸದರಿ 1 ನೇ ವಾದಿ ಮಂಜುನಾಥ ಜನಿಸಿದ್ದಾನೆ ಎಂದರೆ ಸರಿಯಲ್ಲ. ಸದರಿ 1 ನೇ ವಾದಿಯ ತಂದೆಯ ಹೆಸರು ಮತದಾರರ ಚೀಟಿಯಲ್ಲಿ ಪಕೀರಪ್ಪ ಸಳಕೆನವರ ಎಂದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಅಸಲು ದಾವೆ 98/2017 ರ 2 ನೇ ಪ್ರತಿವಾದಿ ನನಗೆ ಹೇಳಿದಂತೆ ಈಗ ಅವನಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಕೀರಪ್ಪ ಮತ್ತು ಯಲ್ಲವ್ವಳ ಮಧ್ಯ ವಿವಾಹ ವಿಚ್ಚೇದನ ಆಗಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಅದೆ,

2 ನೇ ಹೆ ಹಿ ದಿ ನ್ಯಾ ಮತ್ತು ಜೆಎಂಎಫಸಿ

ಧಾರವಾಡ.